ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 10 ಸಂಚಿಕೆ : 1 ಪುಟ : 8 ಆಗಸ್ಟ್-ಸೆಪ್ಟೆಂಬರ್ 2016

ಆತ್ಮೀಯ ಕಾರ್ಮಿಕರೇ,

ದೀರ್ಘ ಸಮಯದ ನಂತರ 'ಸೂಜಿ-ದಾರ' ಮತ್ತೆ ನಿಮ್ಮೆಲ್ಲರ ಕೈಯಲ್ಲಿದೆ. ಗಾರ್ಮೆಂಟ್ಸ್ ಕಾರ್ಮಿಕರಿಂದ ಕಾರ್ಮಿಕರಿಗಾಗಿ ಕಳೆದ 11 ವರ್ಷಗಳಿಂದ ಮೂಡಿಬರುತ್ತಿದ್ದ ಈ ಪತ್ರಿಕೆ ಕಳೆದ ವರ್ಷ ಪೂರ್ತಿ ಅನಿವಾರ್ಯ ಕಾರಣಗಳಿಂದ ಬಂದಿರಲಿಲ್ಲ. ಅದಕ್ಕಾಗಿ ನಿಮ್ಮೆಲ್ಲರ ಕ್ಷಮೆ ಯಾಚಿಸುತ್ತಿದ್ದೇವೆ ಹಾಗೂ ಇನ್ನು ಮುಂದಿ ಪ್ರತಿ ಎರಡು ತಿಂಗಳಿಗೊಮ್ಮೆ ಸೂಜಿ-ದಾರ ನಿಮ್ಮ ಕೈ ಸೇರುತ್ತದೆ ಎಂದು ಭರವಸೆ ನೀಡಿ ಅದಕ್ಕಾಗಿ ಬದ್ಧರಾಗಿರುತ್ತೇವೆ.

ಗಾರ್ಮೆಂಟ್ಸ್ ಉದ್ಯಮ ಇಂದು ಹೆಚ್ಚು ಹೆಚ್ಚು ಬದಲಾವಣೆಗಳನ್ನು ಕಾಣುತ್ತಿದೆ. ಸಂಘಟನೆ ಪ್ರಾರಂಭವಾದ ಕಳೆದ 14 ವರ್ಷಗಳಿಂದಲೂ ಸಹ ನಾವು ಆಗ್ರಹಿಸುತ್ತಿರುವುದು ನಮಗೆ ಗೌರವವಾಗಿ ಬದುಕಲು ಬೇಕಾದ ವೇತನ ಹಾಗೂ ಕಿರುಕುಳಮುಕ್ತ ಕೆಲಸದ ವಾತಾವರಣಕ್ಕಾಗಿ. ವಿಪರ್ಯಾಸವೆಂದರೆ ಕಳೆದ 10 ವರ್ಷಕ್ಕೆ ಹೋಲಿಸಿದರೆ ನಮ್ಮ ವೇತನವು ಎರಡು ಪಟ್ಟು ಹೆಚ್ಚಾಗಿದ್ದರೂ ಸಹ ನಮಗೆ ಬದುಕಲು ಸಾಧ್ಯ ವಾಗುತ್ತಿಲ್ಲ. ಕೆಲಸದ ಸ್ಥಳದಲ್ಲಿನ ಕಿರುಕುಳದ ವಿರುದ್ಧ ನಮ್ಮ ಹೋರಾಟ ತೀವ್ರವಾದಂತೆಲ್ಲ, ಅದು ಹೊಸ ಸ್ವರೂಪದಲ್ಲಿ ಕಂಡು ಬರುತ್ತಿದೆ.

ನಮ್ಮ ಸರ್ಕಾರಗಳೂ ಸಹ ನಮಗಾಗಿ ಇರುವ ಅಲ್ಪಸ್ವಲ್ಪ ಕಾನೂನು ಗಳನ್ನೂ ಸಹ ಬಂಡವಾಳಶಾಹಿಗಳ ಪರವಾಗಿ ಬದಲಾಯಿಸಲು ಹೊರಟಿದೆ. ಕಳೆದ ಏಪ್ರಿಲ್‌ನಲ್ಲಿ ಪಿ.ಎಫ್. ಕಾಯಿದೆ ತಿದ್ದುಪಡಿ ತಂದು ಕಾರ್ಮಿಕರ ಚಳುವಳಿಯ ಪರಿಣಾಮವಾಗಿ ಕೇಂದ್ರ ಸರ್ಕಾರ ಆದೇಶವನ್ನು ಹಿಂಪಡೆದದ್ದೇ ಸಾಕ್ಷಿ. ರೈತರು, ಕಾರ್ಮಿಕರೇ ಬೆನ್ನೆಲು ಬಾಗಿರುವ ಈ ದೇಶದಲ್ಲಿ ಅತ್ಯಂತ ಅನ್ಯಾಯಕ್ಕೊಳಗಾಗುತ್ತಿರುವವರು ಈ ಇಬ್ಬರೇ ಎಂದು ಹೇಳಲು ವಿಷಾದವಾಗುತ್ತದೆ.

ಈ ಇಡೀ ವ್ಯವಸ್ಥೆಯಲ್ಲಿ, ಒಂದೆಡೆಯಿಂದ ಸಂಘಟನೆ ಕಟ್ಟುತ್ತಾ ಹೋದರೆ, ಮತ್ತೊಂದೆಡೆಯಿಂದ ಹಲವಾರು ರೀತಿಯಲ್ಲಿ ಅದನ್ನು ನಿಷ್ಕ್ರಿಯಗೊಳಿಸಲಾಗುತ್ತಿದೆ. ಆದರೂ ಕಾರ್ಮಿಕರ ಹೋರಾಟದಲ್ಲಿ ಭರವಸೆ ಕಳೆದುಕೊಳ್ಳದೆ, ಆಶಾವಾದಿಗಳಾಗಿ ನಾವು ನಮ್ಮ ಹೋರಾಟ ಮುಂದುವರೆಸಲೇಬೇಕಾಗಿದೆ. ಅದಕ್ಕೆ ನಮಗೂ ಕೆಲವು ಬದ್ಧತೆ ಗಳಿರಬೇಕು, ಸಿದ್ಧತೆಗಳಿರಬೇಕು.ಏಕೆಂದರೆ ನಮ್ಮ ಹೋರಾಟ ಕೇವಲ ಒಬ್ಬಿಬ್ಬರ ವಿರುದ್ಧ ಅಲ್ಲ. ನಮ್ಮನ್ನು ಹಲವಾರು ರೀತಿಯಲ್ಲ ಹಿಂಸಿಸು ತ್ತಿರುವ ಬಂಡವಾಳಶಾಹೀ, ಪುರುಷ ಪ್ರಧಾನತೆ, ಧರ್ಮ, ರಾಜಕಾರಣ ಎಲ್ಲದರ ವಿರುದ್ಧವೂ ನಮ್ಮ ಹೋರಾಟ ನಿರಂತರವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಕೇವಲ ಕಾರ್ಮಿಕ ಚಳವಳಿಯೊಂದಲ್ಲದೆ, ಸಮಾಜದ ಹಲವಾರು ಸಮಾಜಮುಖೀ ಸಂಘಟನೆ, ಆಂದೋಲನ, ಚಳವಳಿ ಗಳೊಡನೆ ನಾವು ಸೇರಲೇಬೇಕು.

ಆ ಆಶಯದೊಂದಿಗೇ ನಮ್ಮ ಸಂಘಟನೆಗಳು ನಾಡಿನ, ದೇಶದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸಮಾನ ಮನಸ್ಕ, ಸಂಘಟನೆ ಗಳೊಂದಿಗೆ ಗುರುತಿಸಿಕೊಂಡು, ಎಲ್ಲರ ಬೆಂಬಲದೊಂದಿಗೆ ಮುಂದು ವರೆಯುತ್ತಿದೆ. ಮತ್ತು ಇದು ಈ ಹೊತ್ತಿನ ಅನಿವಾರ್ಯವೂ ಕೂಡ. □




Scanned with OKEN Scanner

# ವಿಜಯಪುರದಲ್ಲಿ ಮಹಿಳಾ ದಿನಾಚರಣೆ



ಈ ಬಾರಿಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವಿಜಯಪುರದಲ್ಲಿ ಎಂದು ನಿರ್ಧಾರವಾಗಿ ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟದ ವತಿಯಿಂದ ತಂಡದ ಕೆಲಸ ಪ್ರಾರಂಭವಾಯಿತು. ಹೆಣ್ಣು ಮಕ್ಕಳಲ್ಲಿ ಎಲ್ಲಿಲ್ಲದ ಹುರುಪು, ಸಂತಸ, ಕಷ್ಟಗಳೊಂದಿಗೆ ಚಂದಾ ಎತ್ತುವ ಕೆಲಸದ ಜೊತೆ ಅದೇ ಹೆಣ್ಣು ಮಕ್ಕಳಿಂದ ಕರವಸ್ತ್ರವು ಚಾಂದ್ ಬೀಬಿ ನೆನಪಿನೊಂದಿಗೆ ಹೊಲೆಯಲಾಯಿತು. ನಿರೀಕ್ಷೆಗೂ ಮೀರಿದ ರೀತಿ ಎಲ್ಲಾ ಕೆಲಸಗಳು ಮುಗಿದು ಮಾರ್ಚ್ 8ರ ದಿನವೂ ಬಂತು. ವಿಚಾರ ಸಂಕಿರಣದಲ್ಲಿ ಒಂಟಿ ಮಹಿಳೆಯರ ಬಗ್ಗೆ ಚರ್ಚೆ ಇತ್ತು. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಎರಡು ಸಂಘಟನೆಗಳೂ ನಾಲ್ಕು ವರ್ಷದಿಂದಲೂ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದೊಂದಿಗೆ ನಡೆದುಬರುತ್ತಿದೆ. ಈ ಬಾರಿಯು ವಿಜಯಪುರಕ್ಕೆ



ಬೆಂಗಳೂರಿನಿಂದ ಸುಮಾರು 8 ಜನ ಹೋಗಿದ್ದೆವು. ವಿಚಾರ ಸಂಕಿರಣದಲ್ಲಿ ಮಹಿಳೆಯರು ತಮ್ಮ ಅದ್ಭುತ ಮಾತುಗಳಿಂದ ಎಲ್ಲರ ಗಮನ ಸೆಳೆದರು. ಸಂಜೆ ಕಪ್ಪು ಉಡುಪಿನಲ್ಲಿ ಮಹಿಳೆಯರ ಕಾರ್ಯಕ್ರಮವು ಎಲ್ಲರ ಗಮನ ಸೆಳೆಯಿತು. ಮಾರ್ಚ್ 9ರಂದು ಮಹಿಳಾ ದಿನಾಚರಣೆಗೆ ಆಗಮಿಸಿದ ಅತಿಥಿ ಮೇಧಾಪಾಟ್ಕರ್ ರವರು ಮಹಾನ್ ಕ್ರಾಂತಿಕಾರಿ ಮಹಿಳೆ. ಅವರ ಒಂದೊಂದು ಮಾತು ಎಲ್ಲರ ಕೆಂಪು ರಕ್ತವನ್ನು ಬಿಸಿಯಾಗಿಸಿತು. ಕ್ರಾಂತಿಕಹಳೆಯನ್ನೆ ಮೊಳಗಿಸಿದರು. ಮಹಿಳೆ ಅಬಲೆಯಲ್ಲ ಸೌಟು ಹಿಡಿಯುವ ಕೈಗಳು ಕತ್ತಿಯನ್ನು ಹಿಡಿಯಬಲ್ಲವು, ಯಾರೋ ಸಾಹುಕಾರನಿಗೆ ಉತ್ತರಿಸುವ ನಾವುಗಳು ಸರ್ಕಾರವನ್ನು ಪ್ರಶ್ನಿಸಬಲ್ಲೆವು, ನಾವು ಮುದುಡುವ ಹೂಗಳಲ್ಲ, ಉರಿಯುವ ಕೆಂಡಗಳು ಎಂಬ ಕ್ರಾಂತಿಕಾರಿ ಮಾತುಗಳು ನಮ್ಮಲ್ಲಿ ಕ್ರಾಂತಿಯ ಕಿಚ್ಚನ್ನು ಹೆಚ್ಚಿಸಿತು. ಈ ಕಾರ್ಯಕ್ರಮದ ಯಶಸ್ಸು ನಮಗೆಲ್ಲಾ ನಿರೀಕ್ಷೆಗೂ ಮೀರಿದ ಸಂತೋಷ ತಂದಿತು.

❒

## D.A (ತುಟ್ಟಿ ಭತ್ಯೆ)

ಗಾರ್ಮೆಂಟ್ ಕಾರ್ಮಿಕರಿಗೆ ಇಂದಿಗೂ ದೊರೆಯುತ್ತಿರುವುದು ಬಡತನದ ರೇಖೆಗಿಂತ ಕಡಿಮೆಯಾದ ರೂ.7000ಗಳ ಕನಿಷ್ಠ ವೇತನ ಅಷ್ಟೇ. 2014ರ ವರೆಗೆ ಕೇವಲ ರೂ.4,700 ಇದ್ದ ಕನಿಷ್ಠ ವೇತನವು GATWUವಿನ ಸತತ ಹೋರಾಟದಿಂದ ರೂ.7000ದ ವರೆಗೆ ಹೆಚ್ಚಾಯಿತು. ಆದರೆ ಈ ವೇತನವೂ ಸಹ ವೈಜ್ಞಾನಿಕವಾಗಿ ನಿಗದಿಯಾಗಿರಲಿಲ್ಲ. ಇಷ್ಟು ಕಡಿಮೆ ವೇತನವು ಗಾರ್ಮೆಂಟ್ಸ್ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳನ್ನು ಅತ್ಯಂತ ಕೆಳಮಟ್ಟಕ್ಕೆ ತಳ್ಳುತ್ತಿವೆ. ಸಾಮಾಜಿಕ ಅಸಮಾನತೆ ಹೆಚ್ಚಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳೆಲ್ಲ ಕೈಗೆಟುಕದಷ್ಟು ಹೆಚ್ಚಾಗಿರುವ ಈ ಸಂದರ್ಭದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಅತ್ಯಂತ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ ಎಂಬುದು GATWU ನಡೆಸಿದ ಸಮೀಕ್ಷೆಯಿಂದ ಕಂಡುಬರುತ್ತಿದೆ. ಸರ್ಕಾರಗಳು ಕನಿಷ್ಠ ವೇತನವನ್ನು ನಿಗದಿ ಮಾಡುವಾಗ ಯಾವುದೇ ವೈಜ್ಞಾನಿಕ ತಳಹದಿಯ ಮೇಲೆ ನಿಗದಿಗೊಳಿಸದೇ ಇರುವುದೂ ಸಹ ಕಾರ್ಮಿಕರ ಈ ಪರಿಸ್ಥಿತಿಗೆ ಮುಖ್ಯ ಕಾರಣವಾಗಿದೆ. ಒಂದೊಮ್ಮೆ ಸರ್ಕಾರ ಇದಕ್ಕೆ ಪ್ರಯತ್ನಿಸಿದಲ್ಲಿ ಮಾಲೀಕರು ಅದನ್ನು ಖಡಾಖಂಡಿತವಾಗಿ ವಿರೋಧಿಸುತ್ತಿರುವುದು ಇತ್ತೀಚಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಆದರೂ ಯೂನಿಯನ್ ತನ್ನ ಸತತ ಪ್ರಯತ್ನದಿಂದ ಕಾರ್ಮಿಕರಿಗೆ 2016ರಲ್ಲಿ ದಿನಕ್ಕೆ ರೂ 15.32 ಪೈಸೆ ವೇತನ ಹೆಚ್ಚಿಗೆ ಸಿಗುವಂತೆ ಮಾಡಿರುವುದು ಸ್ಮರಣೀಯ. ಮುಂದಿನ ದಿನಗಳಲ್ಲಿ ಮಾಲೀಕ ವರ್ಗ ವೇತನ ಹೆಚ್ಚಿಸುವ ಬಗ್ಗೆ ತಕರಾರು ಮಾಡುತ್ತಿದೆ. ಮುಂದಿನ ವರ್ಷದ ವೇತನಕ್ಕಾಗಿ ಕಾರ್ಮಿಕರು ನಮ್ಮೊಂದಿಗೆ ಕೈ ಜೋಡಿಸಿದರೆ ಮಾತ್ರ ವೇತನ ಹೆಚ್ಚಿಸುವಲ್ಲಿ ನಾವು ಯಶಸ್ವಿಯಾಗಬಹುದು.

❒



Scanned with OKEN Scanner



# ಇತಿಹಾಸ ಸೃಷ್ಟಿಸಿದ ಗಾರ್ಮೆಂಟ್ ಕಾರ್ಮಿಕರು

ಏಪ್ರಿಲ್ 18 ಮತ್ತು 19ರಂದು ಗಾಮೆಂಟ್ಸ್ ಕಾರ್ಮಿಕರು ನಡೆಸಿದ ಹೋರಾಟದ ಬಿಸಿ ತಟ್ಟದವರಿಲ್ಲ. 'ಬಡವನ ಸಿಟ್ಟು ದವಡೆಗೆ ಮೂಲ', 'ಬಡವ ನೀ ಮಡಗಿದಂಗೆ ಇರು' ಎಂಬಂಥ ಗಾದೆ ಮಾತುಗಳು, ಬಡವರೆಂದೂ ಯಾರ ವಿರುದ್ಧವೂ ತಿರುಗಿ ಬೀಳಬಾರದು ಅಥವಾ ತಿರುಗಿಬಿದ್ದರೆ 'ಹುಷಾರ್' ಹೊಡೆತ ನಿಮ್ಮ ಪಾಲಿಗೆ ಕಟ್ಟಿಟ್ಟ ಬುತ್ತಿ ಬೇರೇನೂ ಅದರಿಂದ ಸಿಗುವುದಿಲ್ಲ ಎಂಬುದನ್ನು ಸಮಾಜ ನಮ್ಮೊಳಗೆ ಒಪ್ಪಿಸುವ ವಿಧಾನವಾಗಿದೆ. ಹೆಚ್ಚು ಕಡಿಮೆ ಎಲ್ಲ ಬಡ ಕುಟುಂಬಗಳನ್ನು ಲೆಕ್ಕವಿಲ್ಲದಷ್ಟು ವರ್ಷದಿಂದ ನಿಭಾಯಿಸುತ್ತ ಬಂದಿರುವವಳು ಮಹಿಳೆ ಎಂಬುದು ವಾಸ್ತವ. ಬಡವನ ಸಿಟ್ಟೇ ದವಡೆಗೆ ಮೂಲವಾಗಿರ ಬೇಕಾದರೆ, ಬಡವನೇ ನೀ ಮಡಗಿದಂಗೆ ಇರು ಎನ್ನುವುದಾದದರೆ ಇನ್ನು ಬಡವಳ ಸಿಟ್ಟು ಯಾವ ಲೆಕ್ಕಕ್ಕೇ? ಲೆಕ್ಕ ಇಟ್ಟುಕೊಳ್ಳದಿದ್ದರೆ ಏನಾಗುವುದೆಂದು ಗಾರ್ಮೆಂಟ್ಸ್ ಮಹಿಳೆಯರು ತಮ್ಮ ಪ್ರತಿಭಟನೆಯ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ. ಹೊಟ್ಟೆಯೊಳಗಿನ ಸಿಟ್ಟನ್ನು ಘೋಷಣೆಗಳ ಮೂಲಕ ಹೊರಹಾಕುತ್ತ ನದಿಯಂತೆ ಹರಿದು ಬರುತ್ತಿದ್ದ ಬಡ ದುಡಿವ ಮಹಿಳೆಯರ ಮೆರವಣಿಗೆಯ ಸಾಗರವೇ ಸಾಕ್ಷಿ.

ಗಾರ್ಮೆಂಟ್ ಕಾರ್ಮಿಕರ ಜೀವನ ಮನವರಿಕೆಯಾಗಬೇಕಾದರೆ ನಾವು ತೊಡುವ ಉಡುಪುಗಳಲ್ಲಿ ಅಡಗಿರುವ ನಿಟ್ಟುಸಿರುಗಳ ಬಿಸಿ ನಮಗೆ ತಾಕಬೇಕು, ಕತ್ತರಿಸಿ, ಜೋಡಿಸಿ ಹೊಲೆಯುವವರ ಹರಿದುಹೋದ ಬದುಕು ಕಾಣಬೇಕು, ಘನತೆಯ ಬದುಕೊಂದನ್ನು ಕಟ್ಟಿಕೊಳ್ಳಲು ಅವರು ನಡೆಸುತ್ತಿರುವ ಹೋರಾಟ ನಮಗೆ ತಿಳಿಯಬೇಕು.

ಬದುಕುವ ವೇತನ, ಕಿರುಕುಳ ಮುಕ್ತ, ಆರೋಗ್ಯಕರ ಕೆಲಸದ ವಾತಾವರಣ, ಸುಸಜ್ಜಿತ ಕ್ರಷ್ ಇತ್ಯಾದಿ ನ್ಯಾಯಯುತ ಬೇಡಿಕೆಗಳಿಗಾಗಿ ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಹದಿನೈದು ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಪ್ರಾಮಾಣಿಕವಾಗಿ ದುಡಿಯುತ್ತಿದೆ. ಜೊತೆಗೆ ಕಾರ್ಮಿಕರಿಗೆ ಯಾವುದೇ ರೀತಿಯ ಅನ್ಯಾಯ ವಾಗಲಿ ಹೆಗಲಿಗೆ ಹೆಗಲು ನೀಡಿ ನ್ಯಾಯ ದೊರಕುವಂತೆ ಮಾಡಿದೆ. ಕೇವಲ ಸಂಬಳದಿಂದ ಅವರ ಜೀವನ ನಡೆಸುವುದು ಸಾಧ್ಯವೇ ಇಲ್ಲ. ಮಕ್ಕಳ ಓದು, ಮನೆ ಭೋಗ್ಯ, ಮಕ್ಕಳ ಮದುವೆ, ಕಾಯಿಲೆ ಇತ್ಯಾದಿ ಖರ್ಚಿನ ಅವಶ್ಯಕತೆಗೆ ಕಾರ್ಮಿಕರು ಅವಲಂಬಿಸುವುದು ಸುಲಭವಾಗಿ ಸಿಗುವ ಮತ್ತು ತೀರಿಸಲು ಸಾಧ್ಯವಿರುವ ಪಿ.ಎಫ್. ಹಣವನ್ನೇ. ಪಿ.ಎಫ್. ಹಣ ಅವರ ತುರ್ತಿಗಿರುವ ಆಪದ್ಧನ. ಹಾಗಾಗಿ ತಿದ್ದುಪಡಿ ತಂದಾಗಿನಿಂದ ಕಾರ್ಮಿಕರು ಆತಂಕಿತರಾಗಿದ್ದರು. ಯಾವುದೇ ಕ್ಷಣದಲ್ಲಾಗಲಿ ಬೀದಿ ಗಿಳಿದು ಹೋರಾಟ ಮಾಡಲು ತಯಾರಾಗಿದ್ದರು. ಹೋರಾಟವನ್ನು ನ್ಯಾಯಯುತವಾಗಿಯೇ ನಡೆಸಬೇಕೆಂಬ ಉದ್ದೇಶದಿಂದ ಸಂಘಟನೆಯು ಫ್ಯಾಕ್ಟರಿಗಳ ಬಳಿ ಸಭೆ ನಡೆಸುತ್ತಿತ್ತು. ಇತರ ಕಾರ್ಮಿಕ ಸಂಘಟನೆಗಳು, ಜನಪರ ಸಂಘಟನೆಗಳನ್ನು ಬೆಂಬಲಿಸಲು ಕೋರಿತ್ತು. ಆದರೆ ಕೆಲವೆಡೆ ಮ್ಯಾನೇಜ್‌ಮೆಂಟಿನ ಕಡೆಯವರೇ ಪಿ.ಎಫ್. ವಿಷಯ ತಿಳಿಸಿದ್ದು ಮತ್ತು ಪತ್ರಿಕೆಯೊಂದರಲ್ಲಿ ಬಂದ ವರದಿಯಿಂದ ಕಾರ್ಮಿಕರ ಆತಂಕ ಹೆಚ್ಚಿದ್ದು ಅದು ಕ್ಷಿಪ್ರ ಹೋರಾಟದ ಸ್ವರೂಪ ಪಡೆದುಕೊಂಡಿತು. ಅದರ ಹಿಂದೆ ಆಸ್ಫೋಟಗೊಂಡಿರುವುದು ಹಲವಾರು ವರ್ಷಗಳಿಂದ ಅಮಾನವೀಯ ವಾದ ದುಡಿತ ಮತ್ತು ಕೆಲಸದ ವಾತಾವರಣ ಹಾಗೂ ಅವಮಾನಕರವಾಗಿ ನಡೆಸಿಕೊಂಡಿದ್ದರಿಂದ ಮಡುಗಟ್ಟಿದ್ದ ಸಿಟ್ಟು ಮತ್ತು ಆಸರೆ ಎಂದು ನಂಬಿದ್ದ ಇಡುಗಂಟನ್ನು ಕಳೆದುಕೊಳ್ಳುವ ಅಭದ್ರತೆ. ಇದು ಪಿತೂರಿಯಾ? ಇದು ಪಿತೂರಿಯೇ ಆದರೆ ಅದಕ್ಕೆ ಕಾರಣ ಬಡ ಹೆಣ್ಣುಮಕ್ಕಳ ಇಡುಗಂಟಿನ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸುವಂತಹ ತಿದ್ದುಪಡಿ ಮತ್ತು ಅದರ ಕಾರಣಕರ್ತರಲ್ಲವೇ?

ಆಪತ್ತಿಗಾಗುವ ಇಡುಗಂಟಿಗೆ ಕನ್ನ ಹಾಕುವ ಯೋಜನೆ ಮಾಡುವ ವರಿಗೆ, ಟ್ರಾಫಿಕ್‌ಜಾಮ್‌ನಲ್ಲಿ ಸಿಕ್ಕಿಕೊಳ್ಳುವ ಮುಗ್ಧನಾಗರಿಕರಿಗೆ ಬೆಳೆದ ಹತ್ತಿ ನೂತು ನೂಲಾಗಿ, ನೇಯ್ದು ಬಟ್ಟೆಯಾಗಿ, ಕತ್ತರಿಸಿ ಹೊಲೆಸಿಕೊಂಡು ಉಡುಪಾಗಿ ನಮ್ಮ ಮೈ ಅಲಂಕರಿಸಿ ಮರ್ಯಾದೆ, ಶೋಭೆ, ಪ್ರತಿಷ್ಠೆಯಾಗಿ ಜೊತೆಗೆ ಕೋಟಿಗಟ್ಟಲೆ ವಿದೇಶಿ ವಿನಿಮಯ ಬಾಚುವುದರ ಹಿಂದೆ ರೈತರು, ನೇಕಾರರು, ಗಾರ್ಮೆಂಟ್ಸ್ ಕಾರ್ಮಿಕರ ಶ್ರಮ ಮತ್ತು ಮಣ್ಣು, ನೀರು, ಗಾಳಿ... ಎಲ್ಲದರೊಂದಿಗಿನ ಸಂಪರ್ಕಕೊಂಡಿ ಎಂದು ಅರಿವಾದರೆ ಆಕ್ರೋಶ, ಆಸ್ಫೋಟಗೊಳ್ಳುವಷ್ಟು ಮಡುಗಟ್ಟುವುದೇ?

ಲೇಖಕರು : ದು. ಸರಸ್ವತಿ

ಲೇಖನ : ಪ್ರಜಾವಾಣಿ ಕೃಪೆ

❐

# 17 ಗಂಟೆ ದುಡಿತ ತರುವ ಅನಾ...

ಗಾರ್ಮೆಂಟ್ ಉದ್ಯಮದ ಬಿಕ್ಕಟ್ಟು – 3

...ಗಳೂರು: ನಗರದ ಸಿದ್ಧ ಉಡುಪು ...ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ...ಡ 80ರಷ್ಟು ಮಹಿಳೆಯರು ...ಕಾರಿಗಳಿಂದ ಬೆನ್ನು ಹಾಗೂ ...ನೋವಿನಿಂದ ಬಳಲುತ್ತಿದ್ದಾರೆ. ಶೇ ...ಷ್ಟು ಮಹಿಳೆಯರು ಕ್ಷಯರೋಗದ ...ಸ್ಯೆಗೆ ತುತ್ತಾಗಿದ್ದಾರೆ.

'ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ...ರ್ಸ್ ಯೂನಿಯನ್' 2015ರಲ್ಲಿ ...ಉಡುಪು ಕಾರ್ಖಾನೆಗಳ ಮಹಿಳಾ ...ಯ ಸ್ಥಿತಿಗತಿಯ ಬಗ್ಗೆ ಸಮೀಕ್ಷೆ ...ತ್ತು. ಅವರು ಅನುಭವಿಸುತ್ತಿರುವ ...ನಾನಾ ಮುಖಗಳನ್ನು ಈ ...ತೆರೆದಿಟ್ಟಿತ್ತು.

...ನವಾನಿಯ 16 ಕಾರ್ಖಾನೆಗಳಲ್ಲಿ ...ಮಾಡುತ್ತಿರುವ ಮಹಿಳೆಯರನ್ನು ...ನ ನಡೆಸಿ ಸಮೀಕ್ಷೆ ಸಿದ್ಧಪಡಿ... ಮಹಿಳೆಯರಿಗೆ ವಿಶ್ರಾಂತಿ ಪಡೆ... ಸಮಯ ಸಿಗುತ್ತಿಲ್ಲ. ಕುಟುಂಬದ ...ಂದಿಗೆ ಬೆರೆಯಲು ಆಗುತ್ತಿಲ್ಲ. ...ಸ್ಥಳಗಳಲ್ಲಿ ಒತ್ತಡ ಹಾಗೂ...

'ಸಿದ್ಧ ಉಡುಪು ಕಾರ್ಖಾನೆಗಳ ನೌಕರರು ದಿನಕ್ಕೆ 16ರಿಂದ 17 ಗಂಟೆ ಕೆಲಸ ಮಾಡುತ್ತಾರೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಕಾರ್ಖಾನೆಗಳಲ್ಲಿ ಕತ್ತೆ ಯಂತೆ ಕೆಲಸ ಮಾಡುತ್ತಾರೆ. ಮನೆಗೆ ಬಂದ ಮೇಲೂ ನೆಮ್ಮದಿ ಇಲ್ಲ. ಮನೆ ಕೆಲಸವನ್ನೂ ಮಾಡಬೇಕಿದೆ. ಹತ್ತಾರು ಕಿ.ಮೀ. ದೂರದ ಪ್ರಯಾಣ ಅವರನ್ನು ಮತ್ತಷ್ಟು ಹೈರಾಣಾಗಿಸುತ್ತದೆ. ಗಾರ್ಮೆಂಟ್ಸ್ ಕಲುಷಿತ ಕಾರ್ಖಾನೆಯಲ್ಲಿ ಬೇಯುವ ಅವರು ಅನಾರೋಗ್ಯವನ್ನು 'ಉಡುಗೊರೆ'ಯಾಗಿ ಪಡೆಯುತ್ತಾರೆ' ಎಂದು ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್...



ನಗರದ ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ನಿಂತೇ ಕೆಲಸ ಮಾಡುತ್ತಿರುವ ಮಹಿಳಾ ಸಿಬ್ಬಂದಿ (ಸಂಗ್ರಹ ಚಿತ್ರ)

ಆಯಾಸ ಪರಿಹಾರ ಮಾಡಿಕೊಳ್ಳು ವಂತಿಲ್ಲ. ಕುಳಿತುಕೊಂಡು ಕೆಲಸ ಮಾಡುವವರು ಎದ್ದು ನಿಂತು ಕೆಲಸ ಮಾಡುವ ಹಾಗಿಲ್ಲ. ಸುಸ್ತಾಗಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದರೂ ಮೇಲ್ವಿಚಾರಕರ ರಗಳೆ ಆರಂಭವಾಗುತ್ತದೆ. ...

ಗಂಟೆ ಬಡಿದ ಕೂಡಲೇ ... ಹೋಗುವಂತಿಲ್ಲ. ಮೇಲ್ವಿಚಾರಕರು ಗುರುತಿಸಿ... ಎತ್ತಿಟ್ಟುಕೊಂಡಿರುತ್ತಾರೆ. ಕೆಲಸ ಮಾಡಿದರೆ ಮಾ... ಚೀಟಿ ಮರಳಿಸುತ್ತಾರೆ. ಕೆಲಸಕ್ಕೆ ವೇತನವೂ ... ಅನಾರೋಗ್ಯದಿಂದ ... ರಿಗೆ, ಗರ್ಭಿಣಿಯರಿಗೆ ... ವಿನಾಯಿತಿ ಇಲ್ಲ' ... ಸಿಬ್ಬಂದಿ ನೋವು ತೋ...

# ಬೆಂಗಳೂರು – ಮೈಸೂರು ಹೆದ್ದಾರಿ ತಡೆದು ಪ್ರತಿಭಟನೆ



## ಇಂದು ಜಿಲ್ಲಾಧಿಕಾರಿ ಕಚೇರಿ ಎದುರು ಧ...



# ...ಗಪಟ್ಟಣ, ಮದ್ದೂರಲ್ಲಿ ಬೀದಿಗಿಳಿದ ಕಾರ್ಮಿಕರು

...ಟ್ಟಿ ಸಿಬ್ಬಂದಿ ...ವಾನಿಯ ಸಿಬ್ಬಂದಿ ಹೆಚ್ಚು ...ಭವಿಸುತ್ತಿದ್ದಾರೆ. ಉಳಿದವರು...

...ಮೇಲೆ ದೌರ್ಜನ್ಯ ಹಾಗೂ ಕಿರುಕುಳ ನಿತ್ಯ ನಿರಂತರ. ಸಿಬ್ಬಂದಿ ಮೇಲೆ ಹತ್ತಾರು ಪರತುಗಳನ್ನು ...

ಪಿಎಫ್ ನೀತಿ ಖಂಡಿಸಿ ಹೆದ್ದಾರಿ ತಡೆ... ಕಾರ್ಖಾನೆ ಆವರಣಕ್ಕೂ ಸಾಗಿದರು...

'ಬೆಳಿಗ್ಗೆ ಎದ್ದ ಕೂಡಲೇ ... ಶುರುವಾಗುತ್ತದೆ. 7.30ಕ್ಕೆ ಮನೆಯಿಂದ ಹೊರಡುವ ಮೊದಲು ಎಲ್ಲ ಕೆಲಸಗಳನ್ನು ಮುಗಿಸಬೇಕು. ಮನೆಗೆ ಮರಳು...

ನಿದ್ದೆ ಬರುವುದೂ ಇಲ್ಲ... ಅಂಟಿಕೊಂಡು ನಾಲ್ಕು ವರ್ಷ...





# ...ತಿಭಟನೆ ಪಿತೂರಿ ...

...ಟ್ಸ್ ಕಾರ್ಮಿಕರ ಸಂಘದ ಅಧ್ಯಕ್ಷೆ ಸ್ಪಷ್ಟನೆ / ಪ್ರಕರಣ ರದ್ದುಗೊಳಿಸಿ...



'ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್' ...

# ...ಪ್ರತಿಭಟನೆ: ಪೊಲೀಸರಿಂದ 54 ಮಂದಿ ಬಂಧ...



...ಬಂಧಿತ ಮೇಲೆ ... 143, 147, 148, 114, 323, 324, 427, 435, 332, 353, 307 ...

## ಬಂಧಿತ ಕಾರ್ಮಿಕರ ಬಿಡು...

# ಗಲಭೆ ಹಿಂದೆ ಕಾಣದ ಕೈಗಳ ಕೈವಾಡ?



# ...eanuts aplenty in absence of teeth

...ght that garment workers have put up over ...PFs is something that deserves admiration



THE STREET...

# ನ್ಯಾಯಬದ್ಧ ಕನಿಷ್ಠ ವೇತನ ಮತ್ತು ಕಿರುಕುಳ ಮುಕ್ತ ಕೆಲಸದ ವಾತಾವರಣಕ್ಕಾಗಿ ಗಾರ್ಮೆಂಟ್ಸ್ ಕಾರ್ಮಿಕರ ರ್‍ಯಾಲಿ



ನ್ಯಾಯಬದ್ಧ ಕನಿಷ್ಠ ವೇತನ, ಕಿರುಕುಳಮುಕ್ತ ಕೆಲಸದ ವಾತಾವರಣ ಆಗ್ರಹಿಸಿ GATWU ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ ಜನವರಿ 31ರಂದು ಬೃಹತ್ ರ್‍ಯಾಲಿ ಆಯೋಜಿಸಲಾಗಿತ್ತು. ಕಾರ್ಮಿಕರ ಕೂಗು ಸರ್ಕಾರಕ್ಕೆ ಕೇಳಿಸಬೇಕು ಮತ್ತು ಶೋಷಣೆ ಮಾಡುವ ಮಾಲೀಕ ವರ್ಗ ಎಚ್ಚೆತ್ತುಕೊಳ್ಳಲಿ ಎಂಬುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಕಾರ್ಮಿಕ ಮುಖಂಡರು, ಸಂಘಟನೆಯ ಮುಖ್ಯಸ್ಥರು ಹಾಗೂ ಕಾರ್ಯಕರ್ತರು ಮೀಟಿಂಗ್ ಒಂದನ್ನು ಮಾಡಿ ಈ ರ್‍ಯಾಲಿ ಯಾವ ಹಾದಿಯಲ್ಲಿ ಸಾಗಬೇಕು ಮತ್ತು ಹೇಗೆ ಎಂದು ಚರ್ಚಿಸಲಾಯಿತು.

ಟೌನ್‌ಹಾಲ್‌ನಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಹಾದಿಯನ್ನು, ಅದಕ್ಕೆ ಪೊಲೀಸ್ ಪರ್ಮಿಷನ್ ಪಡೆಯಬೇಕು ಎಂದು ನಿರ್ಧರಿಸಲಾಯಿತು. ಡಿಸೆಂಬರ್ ಮೊದಲ ವಾರದಲ್ಲಿ ಪೊಲೀಸ್ ಪರ್ಮಿಷನ್‌ಗೆ ಮನವಿ ಪತ್ರ ಸಲ್ಲಿಸಿದ್ದು, ನಮ್ಮ ಕೈಗೆ ಪತ್ರ ಸಿಕ್ಕಿದ್ದು ಜನವರಿ 30ರಂದು. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಎರಡು ಸಂಘಟನೆಗಳು ಸೇರಿ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು, ರ್‍ಯಾಲಿಯ ಉಳಿದ ಕೆಲಸಗಳು ಡಿಸೆಂಬರ್ ಮೊದಲ ವಾರದಿಂದಲೇ ಪ್ರಾರಂಭವಾಯಿತು. ಸ್ಥಳಕ್ಕೆ ಬುಕ್ಕಿಂಗ್ ಮಾಡಿದ್ದು, ಉಳಿದ ಕೆಲಸಗಳನ್ನು ಯಾರು ಯಾವ ಕೆಲಸವನ್ನು ಎಂದು ಅವರವರ ಕಡೆಯಲ್ಲಿ ಆಗುವ ಕೆಲಸಗಳನ್ನು ಕಾರ್ಮಿಕ ಮುಖಂಡರು ವಹಿಸಿಕೊಂಡರು. ಬಾವುಟ ಮಾಡಿಸುವುದು, ಅದಕ್ಕೆ ಕೋಲುಗಳನ್ನು, ಬಟ್ಟೆಗಳನ್ನು ತರುವುದು, ಪ್ಲಕಾರ್ಡ್‌ಗಳಿಗೆ ಶೀಟ್‌ಗಳನ್ನು ತರುವುದು, ಅದಕ್ಕೆ ಸ್ಲೋಗನ್ ಬರೆಯುವುದು, ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ, ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುವುದು, ಭಿತ್ತಿಪತ್ರಗಳನ್ನು ತಯಾರು ಮಾಡುವುದು, ಅದನ್ನು ಕಾರ್ಖಾನೆಗಳ ಹತ್ತಿರ ಅಂಟಿಸುವುದು ಮತ್ತು ಕರಪತ್ರ ಹಂಚುವುದು. ಇದರ ಮಧ್ಯೆ ಪೊಲೀಸ್ ಪರ್ಮಿಷನ್‌ಗೆ ಓಡಾಡುವುದು ಈ ಕೆಲಸಗಳಲ್ಲಿ ಕಾರ್ಯಕರ್ತರುಗಳ ಶ್ರಮ ಅತಿಮುಖ್ಯವಾದುದು. ಪತ್ರಿಕಾ ಪ್ರಕಟಣೆ ಅದಕ್ಕೆ ಬೇಕಾದ ತಯಾರಿ ಮಾಡುವುದು ಮುಂತಾದ ವಿಷಯಕ್ಕೆ ಸಂಘಟನಾ ಮುಖ್ಯಸ್ಥರು ಕಾರ್ಯನಿರ್ವಹಿಸಿದರು. ರ್‍ಯಾಲಿಗೆ ಎರಡು ದಿನ ಮುಂಚಿತವಾಗಿ ಪತ್ರಿಕಾ ಪ್ರಕಟಣೆ ಮತ್ತು ಪತ್ರಿಕಾ ಗೋಷ್ಠಿ ಏರ್ಪಡಿಸಲಾಯಿತು.

ರ್‍ಯಾಲಿ ಮತ್ತು ಕಾರ್ಯಕ್ರಮದ ದಿನವು ಹತ್ತಿರ ಬರುತ್ತಿದ್ದಂತೆ ಕಾರ್ಯಕರ್ತರಿಗೆಲ್ಲ ತುಂಬಾ ಆತಂಕ. ಕಾರ್ಯಕ್ರಮ ಹೇಗೆ ಮತ್ತು ಎಷ್ಟರಮಟ್ಟಿಗೆ ಮಹತ್ತರವಾಗಿ ಪರಿಣಮಿಸುತ್ತೆ ಎಂಬ ಕಾಳಜಿ. ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಕ್ರಮಕ್ಕೆ ಬಂದವರು ಕಾರ್ಮಿಕರಿಗೆ ಸಂಘಟನೆಯ ಮಹತ್ವ ತಿಳಿಸುವಲ್ಲಿ ಯಶಸ್ವಿಯಾದರು. ಅದರಂತೆ ಕಾರ್ಯಕ್ರಮದಂದು ರ್‍ಯಾಲಿಗೆ ಕಾರ್ಮಿಕರು ದೂರದ ಮದ್ದೂರು, ಶ್ರೀರಂಗಪಟ್ಟಣ, ಮೈಸೂರಿನಿಂದ ಕಾರ್ಮಿಕರು ಬರುವುದು ತಡವಾದರೂ ಸಹ ರ್‍ಯಾಲಿ ಯಶಸ್ವಿಯಾಗಿ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಸಬಾಂಗಣ





Scanned with OKEN Scanner





ಕಾರ್ಮಿಕರಿಂದ ತುಂಬಿ ಅರ್ಧದಷ್ಟು ಕಾರ್ಮಿಕರು ಸಂಪನ್ಮೂಲ ವ್ಯಕ್ತಿಗಳ ಭಾಷಣ ಕೇಳಲು ಸಾಧ್ಯವಾಗದೆ ನಿರಾಶರಾದರು.

ಮಹಿಳಾ ಆಯೋಗದ ಶ್ರೀಮತಿ ಮಂಜುಳ ಮಾನಸರವರು ಕಾರ್ಮಿಕರಲ್ಲಿ ಅದರಲ್ಲೂ ಹೆಣ್ಣು ಮಕ್ಕಳನ್ನು ಅವರ ಸಮಸ್ಯೆಗಳನ್ನು ತಾವೇ ಕಣ್ಣಾರೆ ನೋಡಿ ನೊಂದಿರುವುದಾಗಿ ಹೇಳಿದರು. ಡಾ. ವಸುಂಧರಾ ಭೂಪತಿಯವರು ಗಾರ್ಮೆಂಟ್ಸ್ ಹೆಣ್ಣು ಮಕ್ಕಳು ಕೆಲಸ ಮಾಡಲೇಬೇಕೆಂಬ ಅನಿವಾರ್ಯತೆಯಲ್ಲಿ ತಮ್ಮ ಆರೋಗ್ಯವನ್ನು ಮರೆತಿದ್ದಾರೆ. ಆರೋಗ್ಯದ ಕಡೆಯು ಗಮನಕೊಡಿ ಉತ್ತಮ ಪೌಷ್ಟಿಕಾಂಶವಿರುವ ಆಹಾರ ಸೇವನೆ ಮಾಡಿ ಎಂಬ ಕರೆಕೊಟ್ಟರು. ಶ್ರೀ ಬಾಬು ಮ್ಯಾಥ್ಯೂರವರು-ಕಾರ್ಮಿಕ ಸಂಘಟನೆಗಳು ಬಲಗೊಳ್ಳಬೇಕು, ಬೇಡಿಕೆಗಳು ನಿಖರವಾಗಿರಬೇಕು, ಅದನ್ನು ಕೇಳುವ ನಮ್ಮ ದ್ವನಿ ಗಟ್ಟಿಯಾಗಿರಬೇಕು ಎಂದರು. ಕ್ಲಿಫ್ಟನ್ ಅವರು ನಮ್ಮ ಹಕ್ಕುಗಳು ನಮಗೆ ಸಿಗಬೇಕು, ಸಿಗದಿದ್ದರೆ ಕಿತ್ತುಕೊಳ್ಳಬೇಕು, ಮೊದಲು ತಪ್ಪಿಗೆ ಶಿಕ್ಷೆ ಅಲ್ಲೇ ಕೊಡಿ, ಆಗ ಮಾತ್ರ ತಪ್ಪು ಮಾಡಿದವನಿಗೆ ಅರಿವು ಬರುತ್ತೆ ಎಂಬ ಖಾರವಾದ ಕಾರ್ಮಿಕಪರ ನುಡಿಗಳನ್ನು ಸಿಡಿಸಿದರು. ಈ ಕಾರ್ಯಕ್ರಮ ತುಂಬಾ ವರ್ಷಗಳ ನಂತರ ಒಂದು ಒಳ್ಳೆಯ ಕಾರ್ಮಿಕ ಮುಖಂಡರ ಮುಂದಾಳತ್ವದಲ್ಲಿ ನಡೆದದ್ದು ತೃಪ್ತಿಯನ್ನು ಕೊಟ್ಟಿದೆ. ಕಾರ್ಯಕ್ರಮದಲ್ಲಿ ವೇತನಕ್ಕೆ ಸಂಬಂಧಿಸಿದಂತೆ ಮತ್ತು ಕಾರ್ಖಾನೆಯಲ್ಲಿನ ಕಿರುಕುಳಗಳಿಗೆ ಸಂಬಂಧಿಸಿದಂತೆ ವರದಿಗಳೆರಡು ಬಿಡುಗಡೆ ಮಾಡಲಾಯಿತು.

1. ವೇತನ ಸಮೀಕ್ಷಾ ವರದಿ : CWM ಸಂಘಟನೆಯ ಸಹಯೋಗದಲ್ಲಿ GATWU ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಆದಾಯ-ಖರ್ಚುಗಳ ವೇತನ ಸಮೀಕ್ಷೆಯೊಂದನ್ನು ನಡೆಸಿ ತಯಾರಿಸಿದ ವರದಿ:

2. 'ಪ್ರೊಡಕ್ಷನ್ ಆಫ್ ಟಾರ್ಚರ್' : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ವಿಮೋಚನಾ, ಎ.ಎಲ್.ಎಫ್. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಪಿಯುಸಿಎಲ್ ಕರ್ನಾಟಕ, ಮಂಥನ್ ಲಾ ಈ ಎಲ್ಲಾ ಸಂಘಟನೆಗಳೊಂದಿಗೆ ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳೆಯರಿಗೆ ಆಗುತ್ತಿರುವ ಕಿರುಕುಳಗಳ ಬಗ್ಗೆ ಅಧ್ಯಯನ ನಡೆಸಿ ವರದಿಯನ್ನು ಹೊರತಂದಿತ್ತು.

❒

## "ಮಹಿಳೆಯರು ದಮನ ಮತ್ತು ಶೋಷಣೆಯನ್ನು ಸಹಿಸಲಾರರು" : ಪ್ರೊ. ಉಮಾ ಚಕ್ರವರ್ತಿ



ಪ್ರೊ. ಉಮಾ ಚಕ್ರವರ್ತಿಯವರೊಡನೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಕಾರ್ಯಕರ್ತರು

ಖ್ಯಾತ ಸ್ತ್ರೀವಾದಿ ಇತಿಹಾಸತಜ್ಞೆ ಮತ್ತು ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿರುವ ಶ್ರೀಮತಿ ಉಮಾ ಚಕ್ರವರ್ತಿಯವರು ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದರು. ಆ ಸಂದರ್ಭದಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಪದಾಧಿಕಾರಿಗಳು ಅವರನ್ನು ಭೇಟಿ ಮಾಡಿದರು. ಬೆಂಗಳೂರಿನ ಗಾರ್ಮೆಂಟ್ಸ್ ಮಹಿಳೆಯರು ನಡೆಸಿದ ಹೋರಾಟದ ಬಗ್ಗೆ ಆಸಕ್ತಿ ಇರುವ ಅವರು ಇತ್ತೀಚಿನ ಮುಷ್ಕರ ಕುರಿತು ಎರಡೂ ಸಂಘಟನೆಯವರೊಂದಿಗೆ ಸಂವಾದ ನಡೆಸಿದರು. ಆ ನಂತರ ಗಾರ್ಮೆಂಟ್ಸ್ ಮಹಿಳೆಯರ ಹೋರಾಟ ಕುರಿತು ನೀಡಿದ ಸಂದೇಶವನ್ನು ಇಲ್ಲಿ ಪ್ರಕಟಿಸಲಾಗಿದೆ.

ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಮಹಿಳೆಯರು ಇತ್ತೀಚೆಗೆ ಇಡೀ ಬೆಂಗಳೂರೇ ಸ್ಥಗಿತಗೊಳ್ಳುವಂತೆ ನಡೆಸಿದ ಮಿಂಚಿನ ಮುಷ್ಕರವು ದೆಹಲಿಯಲ್ಲಿ ಹಲವರಿಗೆ ವಿಶೇಷವಾಗಿ ಮಹಿಳಾ ಸಂಘಟನೆಗಳಿಗೆ ಸಂಚಲನ ಮೂಡಿಸಿತು. ಹೋರಾಟವನ್ನು ಕಟ್ಟುವುದು ಎಷ್ಟು ಕಷ್ಟ ಎಂಬುದನ್ನು ನಾವೆಲ್ಲರೂ ಬಲ್ಲೆವು. ಸರ್ಕಾರವು ತಾನು ಏನೇ ಮಾಡಿದರೂ ಜನತೆ ಒಪ್ಪಿಕೊಳ್ಳುತ್ತದೆ ಎಂದು ಭಾವಿಸಿದ್ದು ಹಾಗೂ ತಾನು ಮಾಡುವ ಜನವಿರೋಧಿಯಾದ ಕಾರ್ಪೋರೇಟ್ ಪರವಾದ ನೀತಿಗಳನ್ನು ಯಾರೂ ಪ್ರಶ್ನಿಸದೇ ಒಪ್ಪಿಕೊಳ್ಳಬೇಕೆಂದು ನಿರೀಕ್ಷಿಸಿದ್ದು ಸರ್ಕಾರಕ್ಕೆ ಎಡವಟ್ಟಾಯಿತು. ಐವತ್ತೆಂಟರ ವಯಸ್ಸಿನವರೆಗೂ ಪಿಎಫ್ ಹಣವನ್ನು ಮುಟ್ಟಬಾರದೆಂಬ ಮೂರ್ಖತನದ ವಿಚಾರಗಳು ಮಹಿಳೆಯರ ಮೇಲೆ ಎಂಥ ಪರಿಣಾಮವನ್ನು ಬೀರುತ್ತದೆ ಎಂಬ ಬಗ್ಗೆ ಸರ್ಕಾರಕ್ಕೆ ಅರಿವಿಲ್ಲ. ಮಹಿಳೆಯರು ಏನು ಮಾಡಬಲ್ಲರು ಎಂಬ ಉಡಾಫೆಯ ನಿಲುವು ಸರ್ಕಾರದ್ದು. ಹೀಗೆ ಪ್ರತಿಭಟಿಸಬಲ್ಲರು ಎಂದು ಸರ್ಕಾರ ಊಹಿಸಿರಲಿಲ್ಲ. ಈ ಮಹಿಳೆಯರು ಎಷ್ಟೆಲ್ಲಾ ಶೋಷಣೆಯನ್ನು ಅನುಭವಿಸಿಕೊಂಡು ದುಡಿದು ಬದುಕಿಗಾಗಿ ಉಳಿಸುವ ನಾಲ್ಕು ಕಾಸಿನ ಮೇಲೂ ಕಣ್ಣು ಹಾಕುವಂಥ ಕಾನೂನನ್ನು ತರುವುದು ಮಹಿಳೆಯರಿಗೆ ಎಂಥ ಸಂಕಟ ಹುಟ್ಟಿಸಬಹುದೆಂದು ಮಹಿಳೆಯರಿಗೇ ಗೊತ್ತು. ದುಡಿಯುವ ವಿಷಯದಲ್ಲಷ್ಟೇ ಅಲ್ಲ ತಮ್ಮ ಹಕ್ಕುಗಳ ಮೇಲೆ ದಾಳಿಯಾದಾಗ ಹೇಗೆ ಹೋರಾಟ ಮಾಡಬೇಕೆಂಬುದಕ್ಕೆ ಬೆಂಗಳೂರಿನ ಗಾರ್ಮೆಂಟ್ಸ್ ಮಹಿಳೆಯರು ಮಾದರಿಯಾಗಿದ್ದಾರೆ. ಕಳೆದ ವರ್ಷ ಮುನ್ನಾರಿನ ಟೀ ಎಸ್ಟೇಟಿನ ಮಹಿಳೆಯರು ನಡೆಸಿದ ಹೋರಾಟ ಮತ್ತೊಂದು ಮಾದರಿಯಾಗಿದೆ. ಮಹಿಳೆಯರು ದಮನ ಮತ್ತು ಶೋಷಣೆಯನ್ನು ಸಹಿಸಲಾರರು, ಉತ್ತಮ ಸಮಾಜ ನಿರ್ಮಾಣಕ್ಕಾಗಿ ಮುಂದೆ ನಿಲ್ಲುತ್ತಾರೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅದು ನನ್ನ ನಂಬಿಕೆಯೂ ಆಗಿದೆ. ❒



Scanned with OKEN Scanner

# ಗಾರ್ಮೆಂಟ್ಸ್ ಕಾರ್ಮಿಕರ ನಾಯಕತ್ವ ವಿಕಸನ ಶಿಬಿರ



ಸಂಘಟನೆಯ ಬೆಳವಣಿಗೆ ಮತ್ತು ಕಾರ್ಮಿಕರ ನಾಯಕತ್ವ ವಿಕಸನ ಎರಡನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು GATWU ಗಳು H.I.D. ಫೋರಂ ನೊಂದಿಗೆ ಸೇರಿ ಸತತವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕಾರ್ಯಾಗಾರಗಳು –ಹೇಗೆ ರೂಪುಗೊಳ್ಳ ಬೇಕು, ಅದರ ಪ್ರಯೋಜನ ಪೂರ್ತಿಯಾಗಿ ಕಾರ್ಮಿಕರ ನಾಯಕತ್ವ ಗುಣ ಬೆಳೆಯಲು ಹೇಗೆ ಸಹಕಾರಿಯಾಗಬೇಕು ಎಂದು ತಿಂಗಳಿಗೊಮ್ಮೆ ಕಾರ್ಯಾಗಾರ ನಡೆಸ ಲಾಗುತ್ತಿದೆ. ಪರಿಣಾಮವಾಗಿ ಕಾರ್ಖಾನೆ ಯಲ್ಲಿರುವ ಕಾರ್ಮಿಕ ಸಮಸ್ಯೆಗಳು ಆದಷ್ಟು ಅವರ ಮೂಲಕವೇ ಪರಿಹಾರ ಕಂಡು ಕೊಂಡಿವೆ. ತಿಳಿಯದ್ದನ್ನು ಕೇಳಿ ತಿಳಿದು ಕೊಂಡು ಸ್ವತಃ ತಾವೇ ಸಂಘಟನೆ ಬೆಳೆಯಲು ಕಾರಣರಾಗಿದ್ದಾರೆ. ಈ ಕಾರ್ಯಾಗಾರ ದಿಂದ ಆದ ಕಲಿಕೆ ಅಪಾರ. ಕಾರ್ಮಿಕ ಮುಖಂಡರಿಗೆ ಮತ್ತು ಸಂಘಟನೆಯ ಕಾರ್ಯಕರ್ತರಿಗೆ ಕಾರ್ಯಾಗಾರದ ಶಿಸ್ತು, ನಿಯಮಗಳು, ಅದರ ಪರಿಪಾಲನೆ ನಿಯಮಿತವಾಗಿ ರೂಢಿಯಾಯಿತು.

ಸಂಘಟನೆ ಮತ್ತು ಅದರ ಮಹತ್ವ, ಸಮಸ್ಯೆಗಳ ಪರಿಹಾರಕ್ಕೆ ಬೇಕಾದ ಕ್ರಮಗಳ ಬಗ್ಗೆ ತಿಳಿದುಕೊಳ್ಳುವ ಮೂಲಕ ನಾಯಕತ್ವ ಬೆಳವಣಿಗೆಯಾಗಿದೆ. ಸಮಾಜದಲ್ಲಿ ಎದುರಾಗುವ ಅನೇಕ ಉಪಯೋಗಿ ಅಂಶಗಳ ಬಗ್ಗೆ ಚರ್ಚೆ, ಅಭ್ಯಾಸಗಳು ತುಂಬಾ ಸಹಕಾರಿಯಾಗಿವೆ.

ಸಂಘಟನೆಯ ಉದ್ದೇಶಗಳನ್ನು ಪ್ರತಿ ಕಾರ್ಯಗಾರದಲ್ಲೂ ತಿಳಿಸಲಾಗುತ್ತದೆ. ಸಂಘಟನೆ ಬಲಗೊಳಿಸುವುದು, ಕಾರ್ಯ ತಂತ್ರಗಳ ಅರಿವು, ಹೊಸ ನಾಯಕಿ\ ನಾಯಕರ ಅನ್ವೇಷಣೆ, ಕಾರ್ಮಿಕ– ಮಾಲೀಕರ ನಡುವೆ ಮಾತಿನ ಕೌಶಲ್ಯ ಅಂತರರಾಷ್ಟ್ರೀಯ ಸಂಘಟನೆಗಳು & ಅವುಗಳ ಉದ್ದೇಶಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ. ಇದರೊಂದಿಗೆ ಪ್ರತಿ ಕಾರ್ಯಾಗಾರದಲ್ಲೂ ಕಟ್ಟುಪಾಡುಗಳನ್ನು ಪಾಲಿಸುವುದು, ಹಿಂದಿನ ಕಾರ್ಯಗಾರದ ಅಭ್ಯಾಸಗಳ ಪರಿಶೀಲನೆ ಮುಂತಾದವುಗಳ ಬಗ್ಗೆ ಗಮನಹರಿಸುತ್ತಾರೆ. ಹೆಣ್ಣು–ಗಂಡು ಎಂಬುದು ದೈಹಿಕ ಭಿನ್ನತೆಯೇ ಹೊರತು, ಮಿಕ್ಕಿದ್ದೆಲ್ಲ ಗುಣಗಳು ಸಮಾಜದಿಂದ ಹೇರಿರುವಂತಹುದು. ಸಂಘಟನೆ ಕಟ್ಟುವ ಪ್ರಕ್ರಿಯೆಯಲ್ಲಿ ಈ ಅರಿವು ಬಹಳ ಮುಖ್ಯ. ಆದ್ದರಿಂದ ನಾಯಕತ್ವ ತರಬೇತಿಯಲ್ಲಿ 'ಲಿಂಗತ್ವ'ದ ಬಗ್ಗೆ ತರಬೇತಿ ನೀಡಲಾಗುತ್ತಿದೆ. ನಂತರ ಸಂವಹನದ ಬಗ್ಗೆ ತಿಳಿಸಿಕೊಡಲಾಗುತ್ತಿದೆ.

ಉತ್ತಮ ಮಾತುಗಾರಿಕೆ, ಅದರ ಗುಣ ಲಕ್ಷಣಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಲಾಗುತ್ತಿದೆ. ನಾಯಕನಾದವನಿಗೆ ಉತ್ತಮ ಮಾತುಗಾರಿಕೆ ಇರಬೇಕು. ಕಾರ್ಮಿಕರಿಗೆ ಸಮಸ್ಯೆಗಳನ್ನು ಬಗೆಹರಿಸುವಾಗ ಮಾಲೀಕವರ್ಗದೊಂದಿಗೆ ಸಂಧಾನ ನಡೆಸುವ ಸಮಯದಲ್ಲಿ ಸಂವಹನ ಹೇಗಿರಬೇಕು ಎಂದು ಕಾರ್ಯಾಗಾರದಲ್ಲಿ ಕಲಿತ ಕಲಿಕೆಗೆ ಅಲ್ಲಿಯೇ ಅಭ್ಯಾಸ ಮಾಡಿಸಿದ್ದರಿಂದ ಕಾರ್ಮಿಕರಿಗೆ ಒಬ್ಬರಿಂದ ಇನ್ನೊಬ್ಬರಿಗೆ ತಪ್ಪು–ಸರಿಗಳ ಅರಿವಾಯಿತು. ಇದೇ ರೀತಿ ಕಾರ್ಯಾಗಾರಗಳಲ್ಲಿ ಬ್ರಾಂಡ್‌ಗಳ ಬಗ್ಗೆ ಪೂರ್ಣ ಮಾಹಿತಿ, ಅವುಗಳ ಹೆಸರು, ಯಾವ ದೇಶದ್ದು ಜೊತೆಗೆ ಅವುಗಳ ಆರ್ಥಿಕತೆಯ ತಿಳುವಳಿಕೆ ಕಾರ್ಮಿಕರಿಗೆ ಸಿಕ್ಕಿದ್ದು ತುಂಬಾ ಉಪಯೋಗವಾಗುತ್ತಿದೆ.

ಗಾರ್ಮೆಂಟ್ಸ್‌ಗಳು ಬೆಳೆದು ಬಂದ ದಾರಿ, ಅವುಗಳ ಬೆಳವಣಿಗೆ, ಇಂದಿನ ಸ್ಥಿತಿಗಳ ಬಗ್ಗೆಯು ಸಹ ಈ ಕಾರ್ಯಾಗಾರಗಳಲ್ಲಿ ಮಾಹಿತಿಗಳು ದೊರೆಯುತ್ತಿವೆ. ಸತತವಾಗಿ ಎರಡು ವರ್ಷಗಳಿಂದ ನಡೆಯುತ್ತಿರುವ ಈ ಕಾರ್ಯಾಗಾರಗಳು ಕಾರ್ಮಿಕರ ಮಧ್ಯೆ ಹೆಚ್ಚಿನ ಪ್ರೀತಿ ವಿಶ್ವಾಸ ಗಳಿಸಿದೆ ಎಂದೇ ಹೇಳಬೇಕು. ಕಾರ್ಮಿಕ ಮುಖಂಡರನ್ನು ಹೆಚ್ಚಿನ ಕ್ರಿಯಾಶೀಲರನ್ನಾಗಿ ಮಾಡಲು ಈ ರೀತಿಯ ಕಾರ್ಯಾಗಾರಗಳು ಮಹತ್ವದ ಪಾತ್ರವಹಿಸಿದೆ. ಅದೇ ರೀತಿ ಸಂಘಟನೆಯ ಕಾರ್ಯಕರ್ತರಿಗೂ ತಿಳಿಯದೇ ಇದ್ದ ಅನೇಕ ವಿಷಯಗಳನ್ನು ತಿಳಿಸಿಕೊಟ್ಟ ಮಹತ್ತರ ವೇದಿಕೆಯಾಗಿದೆ. ನಾಯಕ ಗುಣವಿರುವ ಪ್ರತಿಯೊಬ್ಬರೂ ಈ ಕಾರ್ಯಾಗಾರದ ಮೂಲಕ ಇನ್ನಷ್ಟು ಬೆಳೆದಿದ್ದಾರೆ. ಅನೇಕಾನೇಕ ಹೊಸ ನಾಯಕ–ನಾಯಕಿಯರನ್ನು ಗುರುತಿಸಿ ಬೆಳೆಸಿದ್ದಾರೆ. ಕಾರ್ಖಾನೆಗಳಲ್ಲಿ ಕಾರ್ಮಿಕರಿಗಾಗುವ ಸಣ್ಣ ಪ್ರಮಾಣದ ಸಮಸ್ಯೆಗಳು ಅಲ್ಲಿಯೇ ಕಾರ್ಮಿಕ ನಾಯಕರ ಮೂಲಕವೇ ಪರಿಹಾರವಾಗಿದೆ.

ಪ್ರಸ್ತುತ ಈ ಕಾರ್ಯಾಗಾರವು ಒಂದಿಷ್ಟು ಬದಲಾವಣೆಗೆ ಒಳಗಾಗಿದೆ. ಕಾರ್ಖಾನೆಗಳಿರುವ ಬೇರೆ ಬೇರೆ ಜಿಲ್ಲೆಗಳು, ಸ್ಥಳಗಳಿಗೆ ಹೋಗಿ ತರಬೇತಿ ಮಾಡುವುದು ಎಂದು ನಿರ್ಧರಿಸಲಾಗಿದೆ. ಎಚ್.ಐ.ಡಿ. ಫೋರಮ್‌ನ ಬೆಂಬಲವು ಮುಂದೆಯೂ ನಮಗೆ ಸಿಗುತ್ತದೆ ಎಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಆಶಿಸುತ್ತದೆ.



Scanned with OKEN Scanner



# ಆರೋಗ್ಯ ಭಾಗ್ಯ

## ಹೊಟ್ಟೆನೋವು

- ತುಳಸಿ ರಸ ಮತ್ತು ಹಸಿ ಶುಂಠಿರಸ ಸಮಭಾಗ ಬಿಸಿ ಮಾಡಿ ನಾಲ್ಕು ಚಮಚೆ ಯಂತೆ ಎರಡು ಬಾರಿ ಸೇವಿಸಬೇಕು.
- ಲೋಳೆರಸದ ತಿರುಳನ್ನು ನಾಲ್ಕೈದು ಸಲ ತೊಳೆಯಬೇಕು. ಇದನ್ನು ಜೀರಿಗೆ ಮತ್ತು ಬೆಲ್ಲದ ಪುಡಿಯಲ್ಲಿ ಬೆರೆಸಿ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು.
- ಒಂದು ನಿಂಬೆಹಣ್ಣು , 1/2 ಚಮಚೆ ಜೀರಿಗೆ, 1 ಚಿಟಿಕೆ ಅಡುಗೆ ಸೋಡ ಇವೆಲ್ಲವನ್ನು 1/4 ಲೀಟರ್ ನೀರಿನಲ್ಲಿ ಹಾಕಿ ಕುದಿಸಿ, 1/4 ಭಾಗಕ್ಕೆ ಇಳಿಸಿ ದಿನಕ್ಕೆರಡು ಬಾರಿ ಒಂದು ಬಟ್ಟಲು ಕುಡಿಯಬೇಕು. ಮಕ್ಕಳಿಗೆ ಅರ್ಧ ಬಟ್ಟಲು ಕೊಡಬೇಕು.
- ಒಂದು ಚಮಚೆ ಓಮದಕಾಳಿನ ಪುಡಿ (ಅಜಮಾನ) ಮತ್ತು ಒಂದು ಚಿಟಿಕೆ ಸೈಂಧವ ಲವಣದ ಪುಡಿ ಸೇರಿಸಿ ಬಿಸಿನೀರಿನಲ್ಲಿ ಕದಡಿ ಕುಡಿಯಬೇಕು.

## ಮುಟ್ಟಿನ ಸಮಯದ ಹೊಟ್ಟೆನೋವು

- ಮುಟ್ಟಿನ ಸಮಯದಲ್ಲಿ ಮೂರು ದಿನ ಕಡಲೆಕಾಳಿನಷ್ಟು ಗಾತ್ರದ ಹಿಂಗನ್ನು ತುಪ್ಪದಲ್ಲಿ ಹುರಿದು ಬಿಸಿ ನೀರಿನಲ್ಲಿ ದಿನಕ್ಕೆ ಎರಡು ಬಾರಿ ಸೇವಿಸಬೇಕು.
- ಅಮೃತಬಳ್ಳಿ, ನೆಲಗುಳ್ಳ, ಶುಂಠಿ ಇವುಗಳನ್ನು ಸಮಭಾಗ ತೆಗೆದುಕೊಂಡು ಕುಟ್ಟಿ ಪುಡಿ ಮಾಡಿ ಕಷಾಯ ತಯಾರಿಸಿ ಬೆಳಗ್ಗೆ ಹಾಗೂ ಸಂಜೆ ಸಮಯದಲ್ಲಿ ಮೂರು ದಿನಗಳವರೆಗೆ ಕುಡಿಯಬೇಕು.
- ಒಂದು ಚಮಚೆ ತುಂಬೆ ಮತ್ತು ನಿಂಬೆ ರಸಕ್ಕೆ ಚಿಟಿಕೆ ಉಪ್ಪು ಬೆರೆಸಿ ತಕ್ಷಣವೇ ಕುಡಿಯಬೇಕು. ಇದನ್ನು ಋತುಸ್ರಾವದ ಸಮಯದಲ್ಲಿ ಮೂರು ದಿನ ದಿನಕ್ಕೆರಡು ಬಾರಿ ಕುಡಿಯಬೇಕು.

**ಸಂಗ್ರಹ : ಡಾ. ವಸುಂಧರಾ ಭೂಪತಿಯವರ 'ಆರೋಗ್ಯ-ಭಾಗ್ಯ' ಪುಸ್ತಕದಿಂದ**

## ಕಾರ್ಮಿಕರ ಅನಿಸಿಕೆ



ನಮಗೆ ಅಪಾಯಿಂಟ್‌ಮೆಂಟ್ ಲೆಟರ್ ಕೊಟ್ಟಿರಲಿಲ್ಲ, ಓಸಿ ತುಂಬಾ ಮಾಡಿಸುತಿದ್ದರು, ಪೀಸ್ ಇಲ್ಲ ಅಂತ ಹೇಳಿ ಮನೆಗೆ ಕಳುಹಿಸಿ. ಹಬ್ಬಗಳಲ್ಲಿ ಗೌರ್ನಮೆಂಟ್ ರಜೆಗಳಲ್ಲಿ ನಮಗೆ ಕೆಲಸ ಮಾಡಿಸುತಿದ್ದರು. ನಾವು GATWU ಮೆಂಬರ್ ಅದೆವು ಈಗ ನಮಗೆ ಅಪಾಯಿಂಟ್‌ಮೆಂಟ್ ಲೆಟರ್ ಸಿಕ್ಕಿದೆ, ಓಸಿ ಕೆಲಸ ಮಾಡು ವುದಿಲ್ಲ, ನಮ್ಮ ರಜೆಗಳು ನಮಗೆ ಇದೆ. ಮೂವರು ಮಹಿಳಾ ಕಾರ್ಮಿಕರಿಗೆ ವಯಸ್ಸಾಗಿದೆ ಎಂದು ಕೆಲಸದಿಂದ ತೆಗೆದಿದ್ದರು. GATWU ಮ್ಯಾನೆಜ್‌ಮೆಂಟ್ ಜೊತೆ ಮಾತನಾಡಿ ಮತ್ತೆ ಅವರಿಗೆ ಕೆಲಸ ಕೊಡಿಸಿದೆ. ಮಹಿಳಾ ಕಾರ್ಮಿಕರೊಬ್ಬರು ಮಗನಿಗೆ ಹುಷಾರಿಲ್ಲದ ಕಾರಣ 3 ದಿನಗಳು ರಜೆ ಹಾಕಿದರು ಅವರನ್ನು ಕೆಲಸದಿಂದ ತೆಗೆದಿದ್ದರು GATWU ಅವರಿಗೆ ಮತ್ತೆ ಕೆಲಸ ಕೊಡುವಂತೆ ಮಾಡಿತು.ನಮಗೆ ಇ ಎಸ್‌ಐ ಕಾರ್ಡ್ ಯಾರಿಗೂ ಇರಲಿಲ್ಲ. ಎಲ್ಲರಿಗೂ ಫೋಟೊ ತೆಗೆಯಿಸಿ ಸ್ಮಾರ್ಟ್‌ಕಾರ್ಡ್ ಸಿಗುವಂತೆ ಮಾಡಿತು. GATWU ನಮ್ಮ ಶಕ್ತಿ.

**ಉಮೇಶ್, ಶಾಹಿ ಎಕ್ಸ್‌ಪೋರ್ಟ್-26, ಮದ್ದೂರು**

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು.

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ. 216, 2ನೇ ಮಹಡಿ,
ಚೆನ್ನಕೇಶವ ನಿಲಯ, ಗಣೇಶ ದೇವಾಲಯದ ಹತ್ತಿರ, ಪಂತರಪಾಳ್ಯ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560 039
**ದೂರವಾಣಿ : 080-28602325,**
**ಮೊ : 96862 29761, 990129 0495**

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು - 560 026.
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ ಕರ್ನಾಟಕ ಗೃಹ ಮಂಡಳಿ ಕಟ್ಟಡ ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು-560009
   ದೂ.: 22216485
3. **ವಿಮೋಚನಾ**
   ನಂ, 33/1-9, ತ್ಯಾಗರಾಜ ಬಡಾವಣೆ ಜೈಭಾರತನಗರ, ಮಾರುತಿ ಸೇವಾನಗರ ಬೆಂಗಳೂರು-560 038
   ದೂ.: 25492781
4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ, ಎಚ್. ಸಿದ್ಧಯ್ಯರಸ್ತೆ ಬೆಂಗಳೂರು-27

## ಶ್ರೀಲಂಕಾದ ಅನುಭವ



ದಕ್ಷಿಣ ಏಷ್ಯಾ ಕಾರ್ಮಿಕರ ಒಕ್ಕೂಟದಲ್ಲಿ ಬೆಂಗಳೂರಿನಿಂದ ಕಾರ್ಮಿಕರ ಪ್ರತಿನಿಧಿಯಾಗಿ ನಾನು ಶ್ರೀಲಂಕಾಗೆ ಭೇಟಿ ನೀಡಿದೆ. ಅಲ್ಲಿನ ಕಾರ್ಮಿಕರು ನಮ್ಮ ಪರಿಸ್ಥಿತಿಯಲ್ಲೇ ಕೆಲಸ ಮಾಡುತ್ತಿದ್ದಾರೆ. ಅವರೊಂದಿಗಿನ ಒಡನಾಟದಿಂದ ಹಲವಾರು ವಿಷಯ ತಿಳಿದುಕೊಂಡಂತಾಯಿತು. ಅಲ್ಲಿನ ಫ್ಯಾಕ್ಟರಿ ವರ್ಕರ್ಸ್ ನಮ್ಮನ್ನು ತುಂಬಾ ಆತ್ಮೀಯವಾಗಿ ಮಾತನಾಡಿಸಿದರು. ಶ್ರೀಲಂಕಾದವರೇ ಆದ ಶಕೀಲಾರವರು ನನ್ನನ್ನು ತುಂಬಾ ಚೆನ್ನಾಗಿ ನೋಡಿ ಕೊಂಡರು. ಭಾಷೆ ತೊಂದರೆಯಾಗಲಿಲ್ಲ. ಅಲ್ಲಿನ ವಾತಾವರಣ ನನಗೆ ತುಂಬಾ ಹಿಡಿಸಿತ್ತು. ಬೀಚ್ ತುಂಬಾ ಚೆನ್ನಾಗಿತ್ತು. ಅಲ್ಲಿ ಕಳೆದ ದಿನಗಳನ್ನು ನೆನೆದು ನಾನು ಈಗಲು ಸಂತೋಷಪಡುತ್ತೇನೆ. ಅಲ್ಲಿನ ಆಹಾರ ಪದಾರ್ಥಗಳು ತುಂಬಾ ರುಚಿಯಾಗಿತ್ತು. ಶ್ರೀಲಂಕಾದಿಂದ ಒಬ್ಬಳೇ ಬಂದಿದ್ದು ನನ್ನ ಜೀವನದ ದೊಡ್ಡ ಸಾಹಸ.

■ ರತ್ನ ಜಿ.ಎಂ.
ಪ್ರಧಾನ ಕಾರ್ಯದರ್ಶಿ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ

ಸಂಪಾದಕ ಮಂಡಳಿ-ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 216, ಎರಡನೇ ಮಹಡಿ, ಚೆನ್ನಕೇಶವ ನಿಲಯ, ಗಣೇಶ ದೇವಸ್ಥಾನದ ಹತ್ತಿರ, ಪಂತರಪಾಳ್ಯ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560 039. । ಮುದ್ರಣ : ಇಳಾ ಮುದ್ರಣ, ಬೆಂಗಳೂರು - 560 026. ದೂ. : 26757159

Scanned with OKEN Scanner